**ದಿನಾಂಕ 27-05-2013ರಂದು ಮಧ್ಯಾಹ್ನ 2.00 ಗಂಟೆಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಪ್ರೇಮ ಮಹಾಲಿಂಗಪ್ಪ ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಹಣಕಾಸು ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿ.**

ಹಾಜರಿದ್ದ ಸದಸ್ಯರು: ಶ್ರೀಯುತರುಗಳು:

| | | |
|---|---|---|
| 1) ಶ್ರೀಮತಿ ಪ್ರೇಮ ಮಹಾಲಿಂಗಪ್ಪ | - | ಅಧ್ಯಕ್ಷರು |
| 2) ಶ್ರೀಮತಿ ದಾಕ್ಷಾಯಣಿ | - | ಸದಸ್ಯರು |
| 3) ಶ್ರೀ ಸಿ.ಆರ್. ಉಮೇಶ್ | - | ಸದಸ್ಯರು |
| 4) ಶ್ರೀ ಬಡೀರಣ್ಣ | - | ಸದಸ್ಯರು |
| 5) ಶ್ರೀ ರಾಮಚಂದ್ರಯ್ಯ | - | ಸದಸ್ಯರು |
| 6) ಮುಖ್ಯ ಲೆಕ್ಕಾಧಿಕಾರಿಗಳು | - | ಸದಸ್ಯ ಕಾರ್ಯದರ್ಶಿಗಳು |
| 7) ಉಪ ಕಾರ್ಯದರ್ಶಿ ( ಆಡಳಿತ ), ಜಿ.ಪಂ. ತುಮಕೂರು | | |
| 8) ಉಪ ಕಾರ್ಯದರ್ಶಿ ( ಅಭಿವೃದ್ಧಿ ), ಜಿ.ಪಂ. ತುಮಕೂರು | | |

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ ಮಟ್ಟದ ಅಧಿಕಾರಿಗಳು

(ಹಾಜರಾತಿ ವಹಿಯಲ್ಲಿದ್ದಂತೆ )

********

ಪ್ರಾರಂಭದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು, ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ರವರು ಈ ದಿನ ಜಿಲ್ಲಾ ಪಂಚಾಯತಿಯ 2013-14ನೇ ಸಾಲಿನ ಮೊದಲನೇ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತಿಯ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ಮಾನ್ಯ ಶ್ರೀಮತಿ ಪ್ರೇಮ ಮಹಾಲಿಂಗಪ್ಪ ರವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಕೋರಿದರು. ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸದಸ್ಯರುಗಳನ್ನು ಮತ್ತು ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಾಖಾ ಮುಖ್ಯಸ್ಥರನ್ನು ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಭೆಗೆ ಆಗಮಿಸಿರುವ ಸಮಿತಿಯ ಎಲ್ಲಾ ಗೌರವಾನ್ವಿತ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಮತ್ತು ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯ ಕಾರ್ಯಕಲಾಪ ಪ್ರಾರಂಭಿಸಿದರು.

**ವಿಷಯ ಸೂಚಿ:-**

**I. 2012-13ನೇ ಸಾಲಿನ ನವಂಬರ್ 2012, ಡಿಸೆಂಬರ್ 2012, ಜನವರಿ 2013, ಫೆಬ್ರುವರಿ 2013 ಮತ್ತು, ಮಾರ್ಚ್ 2013ನೇ ಮಾಹೆಯ ಕ್ರೋಢಿಕೃತ ಸ್ವೀಕೃತಿ ಮತ್ತು ವೆಚ್ಚದ ಮಾಸಿಕ ಲೆಕ್ಕಗಳಿಗೆ ಅನುಮೋದನೆ ನೀಡುವ ಬಗ್ಗೆ.**

ಸದಸ್ಯ ಕಾರ್ಯದರ್ಶಿಗಳು ಮಾತನಾಡಿ, 2012-13ನೇ ಸಾಲಿನ ನವಂಬರ್ 2012, ಡಿಸೆಂಬರ್ 2012, ಜನವರಿ 2013, ಫೆಬ್ರುವರಿ 2013 ಮತ್ತು ಮಾರ್ಚ್ 2013ರ ಮಾಹೆಯ ಸ್ವೀಕೃತಿ ಮತ್ತು ಲೆಕ್ಕದ ವೆಚ್ಚಗಳನ್ನು ಖಜಾನೆಯಿಂದ ಪಡೆದು ಸಂಕಲನ ಮಾಡಿ ಮಾಸಿಕ ಲೆಕ್ಕ ಸಿದ್ಧಪಡಿಸಲಾಗಿದೆ. ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಮಾಸಿಕ ಲೆಕ್ಕಗಳಿಗೆ ಅನುಮೋದನೆ ನೀಡುವ ಬಗ್ಗೆ ಈ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು ಸದರಿ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಲೆಕ್ಕಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು.

**2012-13ನೇ ಸಾಲಿನ ನವಂಬರ್ 2012, ಡಿಸೆಂಬರ್ 2012, ಜನವರಿ 2013, ಫೆಬ್ರುವರಿ 2013 ಮತ್ತು ಮಾರ್ಚ್ 2013ರ ಮಾಹೆಯ ಕ್ರೋಢೀಕೃತ ಸ್ವೀಕೃತಿ ಮತ್ತು ವೆಚ್ಚದ ಮಾಸಿಕ ಲೆಕ್ಕಗಳಿಗೆ ಅನುಮೋದನೆ ನೀಡಿ ಕ್ರೋಢೀಕೃತ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**II. 2013-14ನೇ ಸಾಲಿಗೆ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ ಜಿಲ್ಲೆಗೆ ಸರ್ಕಾರದಿಂದ ಒದಗಿಸಿರುವ ಅನುದಾನದ ವಿವರ (ಲಿಂಕ್ ಡಾಕ್ಯುಮೆಂಟ್) ವನ್ನು ಸಭೆಯ ಅವಗಾಹನೆಗೆ ಸಲ್ಲಿಸಿರುವುದು.**

ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ಸರ್ಕಾರದಿಂದ ನಮಗೆ ಯೋಜನೆ ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅನುದಾನ ತ್ರೈಮಾಸಿಕವಾಗಿ ಸರ್ಕಾರದಿಂದ ಬಿಡುಗಡೆಯಾಗುತ್ತದೆ ಎಂದು ತಿಳಿಸಿದರು. ಮುಂದುವರೆದು 2013-14ನೇ ಸಾಲಿನ ಅನುದಾನದ ಹಂಚಿಕೆಯ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿದರು.

ಯೋಜನೆ ಕಾರ್ಯಕ್ರಮಗಳಲ್ಲಿ ಶೇಕಡ 24.89ರಷ್ಟು ವೇತನಕ್ಕಾಗಿ ಮತ್ತು ಶೇಕಡ 75.11ರಷ್ಟು ಕಾರ್ಯಕ್ರಮಗಳು/ಕಾಮಗಾರಿಗಳ ಅನುಷ್ಠಾನಕ್ಕಾಗಿ ಹಾಗೂ ಯೋಜನೇತರ ಕಾರ್ಯಕ್ರಮದಲ್ಲಿ ಶೇಕಡ 73.91ರಷ್ಟು ವೇತನಕ್ಕಾಗಿ ಮತ್ತು ಶೇಕಡ 26.09ರಷ್ಟರ ಅನುದಾನವನ್ನು ಕಾರ್ಯಕ್ರಮಗಳು/ಕಾಮಗಾರಿಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ಬಿಡುಗಡೆಯಾಗಿದ್ದು, ಇಲಾಖಾವಾರು ಹಂಚಿಕೆಯಾಗಿರುವ ಅನುದಾನದ ಹಂಚಿಕೆಯ ಸ್ಥೂಲ ವಿವರಗಳನ್ನು ಸಭೆಗೆ ವಿವರಿಸಿದರು.

ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತಿಗಳಿಗೆ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಹಂಚಿಕೆಯಾಗಿರುವ ಅನುದಾನದ ವಿವರ.

**( ರೂ.ಲಕ್ಷಗಳಲ್ಲಿ)**

| ಕ್ರ. ಸಂ. | ಕಾರ್ಯ ಕ್ರಮ | ಯೋಜನೆ | ಶೇಕಡ | ಯೋಜನೇತರ | ಶೇಕಡ | ಒಟ್ಟು | ಶೇಕಡ |
|---|---|---|---|---|---|---|---|
| 1 | ಜಿ.ಪಂ. | 11785.32 | 43.32 | 20835.24 | 30.71 | 32620.56 | 34.32 |
| 2 | ತಾ.ಪಂ. | 12228.13 | 44.95 | 47014.54 | 69.29 | 59242.67 | 62.32 |
| 3 | ಗ್ರಾ.ಪಂ. | 3103.09 | 11.74 | 0.00 | 0.00 | 3193.09 | 3.36 |
| | ಒಟ್ಟು | 27206.54 | 100.00 | 67849.78 | 100.00 | 95056.32 | 100.00 |

**2013-14ನೇ ಸಾಲಿನ ಅನುದಾನದ ಹಂಚಿಕೆ ಶೇಕಡವಾರು**

| ಕ್ರ.ಸಂ. | ಪಂಚಾಯತಿ | ಯೋಜನೆ | ಯೋಜನೇತರ |
|---|---|---|---|
| 1 | ಜಿಲ್ಲಾ ಪಂಚಾಯತಿ | 43 % | 31 % |
| 2 | ತಾಲ್ಲೂಕು ಪಂಚಾಯತಿ | 45 % | 69 % |
| 3 | ಗ್ರಾಮ ಪಂಚಾಯತಿ | 12 % | - |

**ಒಟ್ಟು ಅನುದಾನದಲ್ಲಿ ವೇತನಾಂಶ ಮತ್ತು ಕಾರ್ಯಕ್ರಮಗಳಿಗೆ ಲಭ್ಯವಿರುವ ಹಣದ ವಿವರ**

**( ರೂ. ಲಕ್ಷಗಳಲ್ಲಿ )**

| ಕ್ರ. ಸಂ | ಕಾರ್ಯ ಕ್ರಮಗಳು | ಯೋಜನೆ | ಶೇಕಡ | ಯೋಜನೇತರ | ಶೇಕಡ | ಒಟ್ಟು | ಶೇಕಡ |
|---|---|---|---|---|---|---|---|
| 1 | ವೇತನಾಂಶ | 6772.51 | 24.89 | 50145.57 | 73.91 | 56918.08 | 59.88 |
| 2 | ಕಾರ್ಯ ಕ್ರಮಗಳಿಗೆ | 20434.03 | 75.11 | 17704.21 | 26.09 | 38138.24 | 40.12 |
| | ಒಟ್ಟು | 27206.54 | 100.00 | 67849.78 | 100.00 | 95056.32 | 100.00 |

ಮಾನ್ಯ ಅಧ್ಯಕ್ಷರು ಮಾತನಾಡಿ, 2013-14ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸುವ ಪ್ರಕ್ರಿಯೆಯನ್ನು ಇಲಾಖಾ ಅಧಿಕಾರಿಗಳು ಮಾಡಿಕೊಂಡು, ಸಂಬಂಧಿಸಿದ ಸ್ಥಾಯಿ ಸಮಿತಿಗಳ ಅನುಮೋದನೆಗೆ ಮಂಡಿಸಲು ಕ್ರಮ ಕೈಗೊಳ್ಳಲು ತಿಳಿಸಿ ಇಲಾಖಾ ಅಧಿಕಾರಿಗಳು 2013-14ನೇ ಸಾಲಿಗೆ ಒದಗಿಸಿರುವ ಅನುದಾನಕ್ಕನುಗುಣವಾಗಿ ಸಕಾಲದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಸಂಬಂಧಿಸಿದ ಸ್ಥಾಯಿ ಸಮಿತಿಗಳ ಮೂಲಕ ಮಂಡಿಸಲು ತಿಳಿಸಿ ಕ್ರಿಯಾ ಯೋಜನೆಯನ್ನು ತಯಾರಿಸಲು ಸಮಿತಿಯು ಅನುಮೋದನೆಯನ್ನು ನೀಡಿತು.

**III. 2012-13ನೇ ಸಾಲಿನ ಜಿ.ಪಂ. ಸ್ವೀಕೃತಿ ಮತ್ತು ವೆಚ್ಚದ ವಾರ್ಷಿಕ ಲೆಕ್ಕ ಅನುಮೋದಿಸುವ ಬಗ್ಗೆ.**

ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ, ಜಿಲ್ಲಾ ಪಂಚಾಯತಿಯ 2012-13ನೇ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬಂದ ಅನುದಾನ ಮತ್ತು ಇಲಾಖಾವಾರು ಸ್ವೀಕೃತಿ ಮತ್ತು ವೆಚ್ಚದ ವಿವರಗಳನ್ನು ಜಿಲ್ಲಾ ಖಜಾನೆಯಿಂದ ಪಡೆದು ಸಂಕಲನ ಮಾಡಿ, ವಾರ್ಷಿಕ ಲೆಕ್ಕ ಸಿದ್ಧಪಡಿಸಲಾಗಿದೆ. ಈ ಲೆಕ್ಕವನ್ನು ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು, ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯ ಅನುಮೋದನೆ ಪಡೆದು. ದಿನಾಂಕ:19-01-2013ರ ಸರ್ಕಾರದ ಸುತ್ತೋಲೆಯಂತೆ ದಿನಾಂಕ:30-06-2013ರ ಒಳಗಾಗಿ ಸರ್ಕಾರಕ್ಕೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸಬೇಕಿದೆ. ತದನಂತರ ಮಹಾಲೇಖಪಾಲರು ವಾರ್ಷಿಕ ದೃಢೀಕರಿಸಲು ಆಡಿಟ್ ಕೈಗೊಳ್ಳುವರು. ಮಹಾಲೇಖಪಾಲರ ದೃಢೀಕರಣದ ನಂತರ ವಾರ್ಷಿಕ ಲೆಕ್ಕವನ್ನು ಮುದ್ರಣ ಮಾಡಿಸಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಬೇಕಿದೆ. ಹಾಗೂ ಕೇಂದ್ರ ಸರ್ಕಾರಕ್ಕೆ ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ ಬಿಡುಗಡೆ ಪ್ರಸ್ತಾವನೆ ಸಲ್ಲಿಸಲು ಆಡಿಟ್ ವರದಿ, ವಾರ್ಷಿಕ ಲೆಕ್ಕ ಅನುಮೋದನೆ ದೃಢೀಕರಣ ಅವಶ್ಯವೆಂದು ಸಭೆಯ ಗಮನಕ್ಕೆ ತಂದರು. ಹಾಗೂ ವರ್ಷಿಕ ಲೆಕ್ಕವನ್ನು ಅನುಮೋದಿಸಲು ವಿನಂತಿಸಿದರು.

**ಮುಖ್ಯ ಲೆಕ್ಕಾಧಿಕಾರಿಗಳು ವಿವರವಾದ ಮಾಹಿತಿಯ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಿ, 2012-13ನೇ ಸಾಲಿನ ವಾರ್ಷಿಕ ಲೆಕ್ಕವನ್ನು ಸರ್ವಾನುಮತದಿಂದ ಸಮಿತಿಯು ಅನುಮೋದಿಸಿತು.**

**IV. ಈ ಕೆಳಕಂಡ ಮನವಿದಾರರು/ಸಂಘ ಸಂಸ್ಥೆಯವರು ಧನಸಹಾಯ ಕೋರಿರುವ ಬಗ್ಗೆ.**

| | | |
|---|---|---|
| **1** | ಶ್ರೀ ರಾಮಚಂದ್ರಯ್ಯ, ಜಿ.ಪಂ. ಸದಸ್ಯರು ಮನವಿ ನೀಡಿದ್ದು, ತುಮಕೂರು ತಾ: ಗೂಳೂರು ಮುಳುಕುಂಟೆ ಗ್ರಾಮದ ವಾಸಿಯಾದ ವೆಂಕಟಲಕ್ಷ್ಮಮ್ಮ ಕೋಂ ಲೇಟ್ ಪುಟ್ಟರೇವಯ್ಯ ಎಂಬುವರು ಕೂಲಿ ಕೂಲಿಯಿಂದ ಜೀವನ ಸಾಗಿಸುತ್ತಿದ್ದು ಗುಡಿಸಲಿನಲ್ಲಿ ವಾಸವಿದ್ದು ಆಕಸ್ಮಿಕವಾಗಿ ಬಿದ್ದ ಬೆಂಕಿಯಿಂದ ಗುಡಿಸಲು ಸುಟ್ಟು ಹೋಗಿದ್ದು ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |
| 2 | ಶ್ರೀ ವೈ.ಹೆಚ್. ಹುಚ್ಚಯ್ಯ, ಜಿ.ಪಂ.ಸದಸ್ಯರು ಮನವಿ ನೀಡಿದ್ದು, ಶ್ರೀ ಲಕ್ಷ್ಮೀಕಾಂತ ಬಿನ್ ಲಕ್ಕಯ್ಯ, ಮಲ್ಲಸಂದ್ರ, ತುಮಕೂರು ತಾ: ರವರ ತಂದೆ ತಾಯಿಯವರು ಅನಾರೋಗ್ಯ ದಿಂದ ಬಳಲುತ್ತಿದ್ದು ಚಿಕಿತ್ಸೆ ಕೊಡಿಸಲು ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಸಮಿತಿಯು ಅನುಮತಿಸಿರುವುದಿಲ್ಲ. |

| | | |
|---|---|---|
| **3** | ಶ್ರೀಮತಿ ಲೋಹಿತಾಬಾಯಿ, ಜಿ.ಪಂ.ಸದಸ್ಯರು ಮನವಿ ನೀಡಿದ್ದು ಮಲ್ಲೇನಹಳ್ಳಿ ಗ್ರಾಮದ ರೈತ ಚನ್ನಬಸವೇಶ್ವರಸ್ವಾಮಿ ಇವರ ಮಗಳು ಮೇಘನಾ (8ವರ್ಷ) ಇವರಿಗೆ ಗ್ರೋಥಿಂಗ್ ಹಾರ್ಮೋನ್ ಸಮಸ್ಯೆ ಇದ್ದು ತಿಂಗಳಿಗೆ ಸುಮಾರು ರೂ.15,000/- ಆಸ್ಪತ್ರೆ ಬರುತ್ತಿದ್ದು ಇವರ ಜೀವನ ಬಹಳ ಕಷ್ಟವಾಗಿರುತ್ತದೆ. ಚಿಕಿತ್ಸೆಗೆ ಜಿ.ಪಂ.ನಿಂದ ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |
| **4** | ಜಯಣ್ಣ ಹೆಚ್ C/o ಶಾಂತರಾಮ್ ಬೇಟೆರಾಯ ನಿಲಯ ಕಾಲೇಜ್ ಲಿಂಕ್ ರಸ್ತೆ, ಕುವೆಂಪು ನಗರ, ತುಮಕೂರು ಇವರು ಮನವಿ ನೀಡಿದ್ದು, ಕೆಲ ದಿನಗಳ ಹಿಂದೆ ಅನಾರೋಗ್ಯಕ್ಕೆ ತುತ್ತಾಗಿ ನಗರದಲ್ಲಿ ಇರುವ ಸುರಕ್ಷಾ ಆಸ್ಪತ್ರೆಯಲ್ಲಿ " ಗಾಲ್ ಬ್ಲಾಡ್ ಸ್ಟೋನ್" ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ವೈದ್ಯಕೀಯ ಚಿಕಿತ್ಸೆ ವೆಚ್ಚಕ್ಕೆ ಜಿ.ಪಂ.ನಿಂದ ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಸಮಿತಿಯು ಅನುಮತಿಸಿರುವುದಿಲ್ಲ. |
| **5** | ಪ್ರಾಂಶುಪಾಲರು, ಗುರುಶ್ರೀ ಕಾಲೇಜ್ ಆಫ್ ಕಾಮರ್ಸ್ & ಸೋಶಿಯಲ್ ವರ್ಕ್, 1ನೇ ಅಡ್ಡರಸ್ತೆ, ಎಂ.ಜಿ.ರೋಡ್, ತುಮಕೂರು ಇವರು ದಿ.08-03-2013ರಂದು **" ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"** ಅಂಗವಾಗಿ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದ್ದು ಈ ಕಾರ್ಯಕ್ರಮಕ್ಕೆ ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಸಮಿತಿಯು ಅನುಮತಿಸಿರುವುದಿಲ್ಲ. |
| **6** | ಶ್ರೀ ಗೌಸ್ ಪೀರ್, ಹಳ್ಳಿವ್ಯಾಪಾರಿ, ಹೊಳವನಹಳ್ಳಿ, ವಾಸಿ ಇವರು ಬಡವರಾಗಿದ್ದು, ಅವರ ಮಗನಾದ ಆದಿಲ್ ಪಾಷನ ಎರಡು ಕಿಡ್ನಿಗಳು ನಿಷ್ಕ್ರಿಯಗೊಂಡಿದ್ದು, ಎರಡು ಕಿಡ್ನಿಯನ್ನು ಬದಲಾಯಿಸಬೇಕೆಂದು ಬೆಂಗಳೂರಿನ ಸೆಂಟ್ ಜಾನ್ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿ, ಇದರ ಖರ್ಚು ಸುಮಾರು ಅಂದಾಜು ರೂ.5,50,000/-ಲಕ್ಷಗಳಾಗಬಹುದು ಎಂದು ತಿಳಿಸಿರುವುದರಿಂದ ಚಿಕಿತ್ಸೆಗೆ ಧನಸಹಾಯ ಕೋರಿ ಮನವಿ ಸಲ್ಲಿಸಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |
| **7** | ಶ್ರೀಮತಿ: ದಾಕ್ಷಾಯಿಣಿ, ಜಿ.ಪಂ.ಸದಸ್ಯರು ಮನವಿ ನೀಡಿದ್ದು ಕೊರಟಗೆರೆ ತಾ: ಹೊಳವನಹಳ್ಳಿ ಹೋ: ಮಧ್ಯವೆಂಕಟಪುರ ಗ್ರಾಮ ವಾಸಿ ಶ್ರೀಮತಿ:ಗಂಗಮ್ಮ ಕೋಂ ಬೈಲಾಂಜನಪ್ಪ ರವರಿಗೆ ಅವಧಿಪೂರ್ಣ ಮುಂಚೆ ಜನನವಾದ ಪ್ರಯುಕ್ತ ಶಸ್ತ್ರ ಚಿಕಿತ್ಸೆ ಮತ್ತು ಔಷದೋಪಾಚಾರಕ್ಕೆ ಆದ ವೆಚ್ಚವನ್ನು ಜಿ.ಪಂ.ನಿಂದ ಕೊಡಿಸಿಕೊಡುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಸಮಿತಿಯು ಅನುಮತಿಸಿರುವುದಿಲ್ಲ. |
| **8** | ಸಾ.ಚಿ.ರಾಜಕುಮಾರ, ಪ್ರಧಾನ ಕಾರ್ಯದರ್ಶಿ, ವರದಕ್ಷಿಣೆ ವಿರೋಧಿ ವೇದಿಕೆ(ರಿ),ಸಾಂತ್ವನ ಕೌಟಂಬಿಕ ಸಲಹಾ ಕೇಂದ್ರ, 3ನೇ ಕ್ರಾಸ್, ಕೆ.ಆರ್.ಬಡಾವಣೆ, ತುಮಕೂರು ರವರು ದಿ.09-03-2013ರಂದು ನಗರದಲ್ಲಿ ಮಹಿಳಾ ದಿನಾಚರಣೆಯನ್ನು ವಿಚಾರ ಸಂಕಿರಣ ಹಾಗೂ ಅಭಿನಂದನಾ ಕಾರ್ಯಕ್ರಮ ಏರ್ಪಡಿಸಿದ್ದು ಜಿ.ಪಂ.ವತಿಯಿಂದ ಆರ್ಥಿಕ ಧನಸಹಾಯ ಕೋರಿರುವ ಬಗ್ಗೆ. | ನಿಯಮಾನುಸಾರ ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಸಮಿತಿಯು ಅನುಮತಿಸಿರುವುದಿಲ್ಲ. |

| | | |
|---|---|---|
| 9 | ಪಾವಗಡ ತಾ: ವೈ.ಎನ್.ಹೊಸಕೋಟೆ ಹೋ: ಕೆ.ರಾಂಪುರ ಗ್ರಾಮ ವಾಸಿ ಶ್ರೀ ರುದ್ರಪ್ಪ ಬಿನ್ ನರಸಿಂಹಮೂರ್ತಿ ರವರು ಮನವಿ ಸಲ್ಲಿಸಿದ್ದು, ಅವರ ತಂದರೆಯವರು ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು ಚಿಕಿತ್ಸೆಗಾಗಿ ಧನಸಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |
| 10 | ಶ್ರೀ ವಿ.ಎನ್.ಪ್ರಶಾಂತ್ ಕುಮಾರ್ ಬಿನ್ ವಿ.ಕೆ.ನಾರಾಯಣಪ್ಪ, ವಾಣಿಗೆರೆ, ಕೊತ್ತಗೆರೆ ಹೋ: ಭಕ್ತರಹಳ್ಳಿ ಅಂಚೆ, ಕುಣಿಗಲ್ ತಾಲ್ಲೂಕು ರವರು ಪರಿಶಿಷ್ಟ ಜಾತಿ (ಆದಿದ್ರಾವಿಡ)ಗೆ ಸೇರಿದವರಾಗಿದ್ದು ಇವರ ತಂದೆಯವರಾದ ಶ್ರೀ ವಿ.ಕೆ.ನಾರಾಯಣಪ್ಪ ಬಿನ್ ಲೇ:ಕೆಂಚಯ್ಯ ರವರಿಗೆ ಹೃದಯ ಸಂಬಂಧಿ ಕಾಯಿಲೆಗೆ ಶ್ರೀ ಜಯದೇವ ಹೃದ್ರೋಗ ವಿಜ್ಞಾನ & ಸಂಶೋಧನಾ ಸಂಸ್ಥೆ,ಬೆಂಗಳೂರು ಇಲ್ಲಿ ಶಸ್ತ್ರಚಿಕಿತ್ಸೆಯಾಗಿದ್ದು ನಂತರ ಗುಣಮುಖರಾಗಿರುತ್ತಾರೆ. ದಿನ ನಿತ್ಯದ ಔಷದೋಪಚಾರ ತೆಗೆದುಕೊಳ್ಳುವ ಅನಿವಾರ್ಯತೆಯಿಂದ ಧನಸಹಾಯ ಕೋರಿರುವ ಬಗ್ಗೆ. | ಕೊತ್ತಗೆರೆ ಗ್ರಾ.ಪಂ.ವತಿಯಿಂದ ಶೇ.25ರ ಅನುದಾನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕುಣಿಗಲ್ ಇವರು ರೂ.10,000/- ಧನ ಸಹಾಯ ನೀಡುವಂತೆ ಕ್ರಮವಹಿಸಲು ಸಮಿತಿಯು ತೀರ್ಮಾನಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶಿಸಲು ತೀರ್ಮಾನಿಸಿತು. |
| 11 | ಶ್ರೀ ಜಿ.ವಿನೋದ S/o ಗಂಗಾಧರಯ್ಯ, ಕೊರಟಗೆರೆ ತಾ: ಕೋಳಾಲ ಹೋ: ಎ.ವೆಂಕಟಾಪುರ ಮಜರೆ, ಅಳಾಲಸಂದ್ರ ಗ್ರಾಮದ ಆದಿಕರ್ನಾಟಕ ಜನಾಂಗದವರಾದ ಇವರಿಗೆ ಹೃದಯ ತೊಂದರೆ ಇದ್ದು, ಓಪನ್ ಹೃದಯದ ಚಿಕಿತ್ಸೆ ಮಾಡಿಸಿಕೊಂಡಿರುತ್ತಾರೆ ಹಾಗೂ ಇವರ ತಂದೆ-ತಾಯಿ ಮತ್ತು ಅಕ್ಕನವರು ಒಂದೊಂದು ರೀತಿಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದು, ಆರೋಗ್ಯವನ್ನು ಕಾಪಾಡಿಕೊಳ್ಳಲು ಧನಸಹಾಯ ಕೋರಿರುವ ಬಗ್ಗೆ. | ಅಳಾಲಸಂದ್ರ ಗ್ರಾ.ಪಂ.ವತಿಯಿಂದ ಶೇ.25ರ ಅನುದಾನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕೊರಟಗೆರೆ ಇವರು ರೂ.10,000/- ಧನ ಸಹಾಯ ನೀಡುವಂತೆ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶಿಸಲು ತೀರ್ಮಾನಿಸಿತು. |
| 12 | ಶ್ರೀ ವೈ.ಹೆಚ್. ಹುಚ್ಚಯ್ಯ, ಜಿ.ಪಂ.ಸದಸ್ಯರು ಮನವಿ ನೀಡಿದ್ದು, ಶ್ರೀ ಪರಶಿವ ಮೂರ್ತಿ ಬಿನ್ ಸಾವಂದಯ್ಯ, ಮೂಗನಪುರ, ಕುಣಿಗಲ್ ತಾ: ಇವರು ತಾವು ಬೆಳೆದ ರಾಗಿ ಹುಲ್ಲಿನ ಬಣವೆಗೆ ದಿ.19-02-2013ರ ರಾತ್ರಿ 11-00ಗಂಟೆ ಸುಮಾರಿಗೆ ಕಿಡಿಗೇಡಿ ಗಳು ಬೆಂಕಿ ಹಚ್ಚಿ ಹುಲ್ಲಿನ ಬಣವೆ ಸುಟ್ಟು ಹೋಗಿ ಸುಮಾರು ರೂ.40,000/- ಗಳಷ್ಟು ನಷ್ಟವಾಗಿರುವುದರಿಂದ ಧನಸಹಾಯ ಕೋರಿರುವ ಬಗ್ಗೆ. | ಉಪ ವಿಭಾಗಾಧಿಕಾರಿ, ತುಮಕೂರು ಉಪ ವಿಭಾಗದ.ವತಿಯಿಂದ ರೂ.10,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |

| | | |
|---|---|---|
| **13** | ಮಾನ್ಯ ಅಧ್ಯಕ್ಷರು , ಜಿ.ಪಂ. ತುಮಕೂರು ರವರ ಕಿರು ಟಿಪ್ಪಣಿ ನೀಡಿದ್ದು, ಕೋರ ಹೋಬಳಿ ಹೊಸಹಳ್ಳಿ ಗ್ರಾಮ ವಾಸಿಯಾದ ರಮೇಶ್ ರವರ ಮಗನಾದ ನಿರಂಜನ್ (10 ವರ್ಷ) ಇವರು ದಿ.26-07-2012ರಂದು ಅವರ ಜಮೀನಿನ ಬಾಳೆ ತೋಟದಲ್ಲಿ ಮೇಕೆಯನ್ನು ಹಿಡಿದುಕೊಂಡು ಬರಲು ಹೋದಾಗ ಆಕಸ್ಮಿಕವಾಗಿ ಬದುವಿನಲ್ಲಿದ್ದ ಹಾವು ಕಚ್ಚಿ ಸಾವನ್ನಪ್ಪಿರುತ್ತಾನೆ. ಆದುದರಿಂದ ಕಡುಬಡವರಾದ ಇವರಿಗೆ ಧನಸಹಾಯ ನೀಡುವ ಬಗ್ಗೆ. | ಜಂಟಿ ಕೃಷಿ ನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರು ,ಎ.ಪಿ.ಎಂ.ಸಿ., ತುಮಕೂರು ವತಿಯಿಂದ ಕ್ರಮ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು |
| **14** | ಶ್ರೀ ದರ್ಶನ್ ಹೆಚ್.ವಿ. ಬಿನ್ ವಿರೇಶ್ ಹೆಚ್.ಬಿ. ಎಲೆರಾಂಪುರ ರವರು ಅನಾರೋಗ್ಯ ದಿಂದ ಬಳಲುತ್ತಿದ್ದು ವೈದ್ಯಕೀಯ ವೆಚ್ಚಕ್ಕೆ ಧನಸಹಾಯ ನೀಡುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು. |
| **15** | ಶ್ರೀ ಶಿವಣ್ಣ, ಕಾಟಗೊಂಡನಹಳ್ಳಿ, ಮಧುಗಿರಿ ತಾಲ್ಲೂಕು ಇವರ ಮಗಳಾದ ಕು:ದಿವ್ಯ ಇವರು ತುಮಕೂರು ಅಕ್ಷಯ ಆಸ್ಪತ್ರೆಗೆ ಸೇರಿದ್ದು ಕಫಾ ಇರುವುದರಿಂದ ಚಿಕಿತ್ಸೆಗೆ ರೂ.60,000/-ಗಳಷ್ಟು ಖರ್ಚ್ ಮಾಡಲಾಗಿದ್ದು ಹಾಗೂ ಕೂಲಿಯಿಂದ ಜೀವನ ಸಾಗಿಸುತ್ತಿದ್ದು ಖರ್ಚಿನ ಬಾಬ್ತನ್ನು ಶೇ.20ರ ಅನುದಾನದಡಿ ಮಂಜೂರು ಮಾಡಿಸಿ ಕೊಡುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |
| **16** | ಶ್ರೀಮತಿ ಯಶೋಧ ಶ್ರೀನಿವಾಸ್ , ಜಿ.ಪಂ.ಸದಸ್ಯರು ಮನವಿ ನೀಡಿದ್ದು ಸ.ಹಿ.ಪ್ರಾ.ಪಾಠ ಶಾಲೆ, ಜಕ್ಕೇನಹಳ್ಳಿ ವಿದ್ಯಾರ್ಥಿ ಕು:ಪವಿತ್ರ ಜೆ.ಎಲ್ ಎಂಬ 7ನೇ ತರಗತಿ ವಿದ್ಯಾರ್ಥಿನಿ ಶಾಲಾ ಪ್ರವಾಸದಲ್ಲಿ ಬಸ್ ಅಪಘಾತ ಸಂಭವಿಸಿದ್ದರಿಂದ ವಿದ್ಯಾರ್ಥಿನಿಯು ಸ್ಥಳದಲ್ಲೇ ಮರಣ ಹೊಂದಿದ್ದು, ಸದರಿ ವಿದ್ಯಾರ್ಥಿನಿಯ ಕುಟುಂಬಕ್ಕೆ ಜಿ.ಪಂ.ವತಿಯಿಂದ ಪರಿಹಾರ ಮಂಜೂರು ಮಾಡಿಕೊಡುವ ಬಗ್ಗೆ. | ನಿಯಮಾನುಸಾರ ಜಿಲ್ಲಾ ಪಂಚಾಯತ್ ವತಿಯಿಂದ ಧನ ಸಹಾಯ ನೀಡಲು ಅವಕಾಶವಿರುವುದಿಲ್ಲವೆಂದು ಸಮಿತಿಯು ತೀರ್ಮಾನಿಸಿತು |
| **17** | ಶ್ರೀಮತಿ:ಜಯಮ್ಮ ಎಸ್.ಟಿ.ನಾಗರಾಜು, ಜಿ.ಪಂ.ಸದಸ್ಯರು, ವೈ.ಎನ್.ಹೊಸಕೋಟೆ. ಪಾವಗಡ ತಾ ಇವರು ಮನವಿ ಸಲ್ಲಿಸಿದ್ದು ಅವರ ಕ್ಷೇತ್ರದವರಾದ ಕಮಲಮ್ಮ ಕೋಂ ಸುಬ್ಬರಾಯಪ್ಪ,ಪ.ಜಾ. ರವರು ತೀರ ಕಡುಬಡವರಾಗಿದ್ದು ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಸದರಿಯವರಿಗೆ ಹೃದಯದ ಆಪರೇಶನ್ ಆಗಿರುತ್ತದೆ. ಸದರಿಯವರು ಆರ್ಥಿಕವಾಗಿ ಕಡುಬಡವರಾಗಿರುವುದರಿಂದ ಧನ ಸಹಾಯ ಕೋರಿರುವ ಬಗ್ಗೆ. | ವೈ.ಎನ್.ಹೊಸಕೋಟೆ ಗ್ರಾ.ಪಂ.,ವತಿಯಿಂದ ಶೇ.25ರ ಅನುದಾನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಪಾವಗಡ ಇವರು ರೂ.10,000/- ಧನ ಸಹಾಯ ನೀಡುವಂತೆ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶಿಸಲು ತೀರ್ಮಾನಿಸಿತು. |

| | | |
|---|---|---|
| **18** | ಶ್ರೀ ದ್ಯಾವರಯ್ಯ ಬಿನ್ ದ್ಯಾವರಯ್ಯ ಲೇ:ನಾರಾಯಣಕೆರೆ, ಗೊಲ್ಲರಹಟ್ಟಿ, ನಿಡವಳಲು ಅಂಚೆ, ಹೆಬ್ಬೂರು ಹೋ: ತುಮಕೂರು ತಾಲ್ಲೂಕು ರವರು ವಾಸ ಮಾಡುತ್ತಿದ್ದ ಮನೆಗೆ ದಿ.15-03-2013ರಂದು ಮಧ್ಯಾಹ್ನ 3-00ಗಂಟೆ ಸಮಯದಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಮನೆಯಲ್ಲಿದ್ದ ದವಸ ದಾನ್ಯಗಳು ಹಾಗೂ ಪ್ರಮುಖ ದಾಖಲಾತಿಗಳು ಸುಟ್ಟು ಹೋಗಿರುತ್ತದೆ. ಬಡವರಾದ ಇವರು ಧನಹಾಯ ಕೋರಿರುವ ಬಗ್ಗೆ. | ಜಿಲ್ಲಾ ಪಂಚಾಯತ್ ವತಿಯಿಂದ ರೂ.5,000/- ಧನ ಸಹಾಯ ನೀಡಲು ಸಮಿತಿಯು ತೀರ್ಮಾನಿಸಿತು |

**(ಕ್ರಮ: ಉಪ ಕಾರ್ಯದರ್ಶಿ(ಆಡಳಿತ), ಜಿ.ಪಂ./ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಕುಣಿಗಲ್, ಪಾವಗಡ ಮತ್ತು ಕೊರಟಗೆರೆ/ಜಂಟಿ ಕೃಷಿ ನಿರ್ದೇಶಕರು /ಸಹಾಯಕ ನಿರ್ದೇಶಕರು ,ಎ.ಪಿ.ಎಂ.ಸಿ., ತುಮಕೂರು/ಉಪ ವಿಭಾಗಾಧಿಕಾರಿ, ತುಮಕೂರು)**

**IV) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು**

**1) ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಗಂಗೋತ್ರಿನಗರ, ತುಮಕೂರು ಇವರ ಕಟ್ಟಡಕೆ ಪರಿಷ್ಕೃತ ಬಾಡಿಗೆಯನ್ನು ಪಾವತಿಸುವ ಬಗ್ಗೆ.**

ಸಮಿತಿಯು ಸದರಿ ವಿಷಯವನ್ನು ಪರಿಶೀಲಿಸಿ ವಿದ್ಯಾರ್ಥಿನಿಲಯವನ್ನು ಪರಿಶೀಲಿಸಲು ಪೂರ್ಣ ಪ್ರಮಾಣದ ಅಧಿಕಾರವನ್ನು ಉಪ ಕಾರ್ಯದರ್ಶಿ(ಅಭಿ) ಇವರಿಗೆ ನೀಡಿ, ಉಪ ಕಾರ್ಯದರ್ಶಿ(ಆಡಳಿತ) ಇವರು ಸಾಮಾನ್ಯ ಸ್ಥಾಯಿ ಸಮಿತಿಯಲ್ಲಿ ಮಂಡಿಸಲು ಕ್ರಮವಹಿಸುವಂತೆ ತೀರ್ಮಾನಿಸಿತು.

**(ಕ್ರಮ: ಉಪ ಕಾರ್ಯದರ್ಶಿ(ಅಭಿವೃದ್ಧಿ)/(ಆಡಳಿತ), ಜಿಲ್ಲಾ ಪಂಚಾಯತ್)**

2) ಸಮಿತಿ ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿ ವಸತಿ ನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯ ಮೇಲ್ವಿಚಾರಕರು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದರಿಂದ ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ಊಟೋಪಚಾರಗಳಿಗೆ ಬಹಳ ತೊಂದರೆಯಾಗುತ್ತಿರುವುದು ಕಂಡುಬಂದಿದೆ. ಉದಾಹರಣೆಗೆ ಶಿರಾ ತಾಲ್ಲೂಕಿನ ವಸತಿನಿಲಯ ಒಂದರಲ್ಲಿ ಪರಿಶೀಲನೆ ಮಾಡಲು ಹೋದಾಗ ಗೋಧಿಯಲ್ಲಿ ಹುಳು ಇರುವುದು ಕಂಡುಬಂದಿದ್ದು, ಮಕ್ಕಳಿಗೆ ಇದೇ ಗೋಧಿಯನ್ನು ಬಳಸಿದ್ದಾರೆ, ಹಾಗೂ ಕೊರಟಗೆರೆ ತಾಲ್ಲೂಕಿನಲ್ಲಿ ಪ್ರತಿದಿನವು ಮೊಸರನ್ನ ಮತ್ತು ಚಿತ್ರಾನ್ನವನ್ನು ಮಾತ್ರ ನೀಡುತ್ತಿದ್ದಾರೆ, ಸರ್ಕಾರದಿಂದ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳ ಊಟೋಪಚಾರಗಳಿಗೆ ಸಾಕಷ್ಟು ಹಣ ಬಿಡುಗಡೆ ಆಗುತ್ತಿದೆ. ಆ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳಿಗೆ ಊಟೋಪಚಾರದಲ್ಲಿ ತೊಂದರೆಯಾಗಿ ವಿದ್ಯಾರ್ಥಿಗಳು ವಸತಿನಿಲಯವನ್ನು ಬಿಟ್ಟರೆ ಅವರ ಶೈಕ್ಷಣಿಕ ಮಟ್ಟ ಕುಸಿಯುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು)**

**3)** ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ಮತ್ತು ಶ್ರೀ ಬಡೀರಣ್ಣರವರು ಮಾತನಾಡಿ ಕಳೆದ ಬಾರಿ ಕೃಷಿ ಇಲಾಖೆಯಲ್ಲಿ ಶೇಕಡ 96ರಷ್ಟು ಪ್ರಗತಿಯಾಗಿದೆ. ಆದರೆ ಪ್ರಸ್ತುತ ಜಿಲ್ಲೆಯಲ್ಲಿ ಮೇವಿನ ಕೊರತೆ ಇರುತ್ತದೆ. ಜಿಲ್ಲೆಯಲ್ಲಿ ಎಲ್ಲೆಲ್ಲಿ ಬೇಡಿಕೆ ಇದೆಯೋ ಅಲ್ಲಿಗೆ ಮೇವಿನ ಬೀಜ, ಮುಸುಕಿನ ಜೋಳ ಮತ್ತು ಸೂರ್ಯಕಾಂತಿ ಬಿತ್ತನೆ ಬೀಜವನ್ನು ರೈತರಿಗೆ ಸರಬರಾಜು ಮಾಡಲು ಕೃಷಿ ನಿರ್ದೇಶಕರು ಮತ್ತು ಉಪ ನಿರ್ದೇಶಕರು, ಪಶು ಪಾಲನಾ ಇಲಾಖೆ ಇವರಿಗೆ ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು ,ತುಮಕೂರು/ಉಪ ನಿರ್ದೇಶಕರು, ಪಶು ಪಾಲನಾ ಇಲಾಖೆ)**

**4)** ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ತಾಲ್ಲೂಕಿನಲ್ಲಿ ಹೂವಿನ ಬೆಳೆಗಾರರು ಅಧಿಕ ಸಂಖ್ಯೆಯಲ್ಲಿದ್ದು, ತಾಲ್ಲೂಕಿನ ಚಿಕ್ಕನಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ಮಾರುಕಟ್ಟೆಯಲ್ಲಿ ಈವರೆವಿಗೆ ಯಾವುದೇ ವ್ಯಾಪಾರ-ವಹಿವಾಟು ನಡೆಯುತ್ತಿಲ್ಲ. ಆದಕಾರಣ ಕೂಡಲೇ ವ್ಯಾಪಾರ-ವಹಿವಾಟು ಪ್ರಾರಂಭಿಸಲು ಅನುಕೂಲವಾಗುವಂತೆ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಚುರಪಡಿಸಲು ಟೆಂಡರ್ ಮೂಲಕ ಅಂಗಡಿಗಳನ್ನು ಹರಾಜು ಮಾಡಿ ಹಂಚಿಕೆ ಮಾಡಲು ಕ್ರಮವಹಿಸುವಂತೆ ಹಿಂದಿನ ಸಭೆಯಲ್ಲಿಯೇ ತಿಳಿಸಲಾಗಿತ್ತು. ಆದರೆ ಈವರೆವಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ಸಮಿತಿಯ ಗಮನಕ್ಕೆ ತಂದಾಗ ಮಾನ್ಯ ಅಧ್ಯಕ್ಷರು ಮಾತನಾಡಿ, ಕೂಡಲೇ ಮಾರುಕಟ್ಟೆಯಲ್ಲಿ ವ್ಯಾಪಾರ-ವಹಿವಾಟು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರಿಗೆ ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ)**

**ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ಸದಸ್ಯ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಸಹಿ:-**
**ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ**
**ಸದಸ್ಯ ಕಾರ್ಯದರ್ಶಿಗಳು,**
**ಹಣಕಾಸು, ಲೆಕ್ಕಪರಿಶೋಧನೆ ಮತ್ತು**
**ಯೋಜನಾ ಸ್ಥಾಯಿ ಸಮಿತಿ,**
**ಜಿಲ್ಲಾ ಪಂಚಾಯತ್, ತುಮಕೂರು.**

**ಸಹಿ:-**
**ಅಧ್ಯಕ್ಷರು,**
**ಜಿಲ್ಲಾ ಪಂಚಾಯತ್ ಹಾಗೂ**
**ಹಣಕಾಸು ಲೆಕ್ಕ ಪರಿಶೋಧನೆ ಮತ್ತು**
**ಯೋಜನಾ ಸ್ಥಾಯಿ ಸಮಿತಿ,**
**ಜಿಲ್ಲಾ ಪಂಚಾಯತ್, ತುಮಕೂರು.**

ಸಂಖ್ಯೆ:ತುಜಿಪ/ಮುಲೆಅ/ಹಲೆಪಯೋಸ್ಥಾಸಭೆ/ಸಭಾ ನಡವಳಿ/13-14 ದಿನಾಂಕ:29-05-2013.

ಪ್ರತಿಯನ್ನು:

1. ಅಧ್ಯಕ್ಷರು/ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು ರವರ ಆಪ್ತ ಶಾಖೆಗೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.ತುಮಕೂರು ರವರ ಆಪ್ತಶಾಖೆಗೆ
3. ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸದಸ್ಯರು, ಜಿ.ಪಂ.ತುಮಕೂರು ರವರಿಗೆ
4. ಪ್ರತಿಯನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಇಲಾಖಾ ಮುಖ್ಯಸ್ಥರುಗಳಿಗೆ ರವಾನಿಸುತ್ತಾ, ದಯವಿಟ್ಟು ಸಂಬಂಧಿಸಿದ ಅಂಶಗಳಿಗೆ ಕೂಡಲೇ ಅನುಪಾಲನಾ ವರದಿಯನ್ನು ಮುದ್ದಾಂ ಲೆಕ್ಕ ಶಾಖೆಗೆ ಸಲ್ಲಿಸಲು ಕೋರಿದೆ. ಹಾಗೂ ಅನುಪಾಲನಾ ವರದಿಯನ್ನು **Xerox A4 Size** ಹಾಳೆಯಲ್ಲಿ ಗಣಕೀಕರಣ ಮಾಡಿ **40**(ನಲವತ್ತು) ಪ್ರತಿಗಳನ್ನು ಸಲ್ಲಿಸತಕ್ಕದ್ದು.
5. ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, . . . . . . . . . . .
6. ಸಹಾಯಕ ನಿರ್ದೇಶಕರು ,ಎ.ಪಿ.ಎಂ.ಸಿ., ತುಮಕೂರು ಇವರಿಗೆ ಧನಸಹಾಯದ ಮನವಿ/ಪ್ರಸ್ತಾವನೆಯೊಂದಿಗೆ ಸೂಕ್ತ ಕ್ರಮಕ್ಕಾಗಿ.
7. ಉಪ ವಿಭಾಗಾಧಿಕಾರಿಗಳು, ತುಮಕೂರು ಇವರಿಗೆ ಧನಸಹಾಯದ ಮನವಿ/ಪ್ರಸ್ತಾವನೆಯೊಂದಿಗೆ ಸೂಕ್ತ ಕ್ರಮಕ್ಕಾಗಿ.
8. ಜಿಲ್ಲಾ ಪಂಚಾಯತ್ ಶಾಖಾ ಮುಖ್ಯಸ್ಥರಿಗೆ, ಅಕ್ಷರ ದಾಸೋಹ, ಸಂಕಲನ ಶಾಖೆ. ಕಳುಹಿಸಲಾಗಿದೆ.
9. ಕಛೇರಿ ಪ್ರತಿ

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಹಣಕಾಸು, ಲೆಕ್ಕಪರಿಶೋಧನೆ ಮತ್ತು
ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ತುಮಕೂರು.